# ಪೃಥ್ವಿ ಪರಪಂಚ

■ ಸುಮಲತಾ ಎನ್



‘ಜೂನಿ’, ‘ಫಾರ್ ರಿಜಿಸ್ಟ್ರೇಷನ್’, ‘ಮತ್ಸ್ಯಗಂಧ...’– ನಟ ಪೃಥ್ವಿ ಅಂಬಾರ್ ಅಭಿನಯದ ಸಾಲು ಸಾಲು ಸಿನಿಮಾಗಳು ಈ ವರ್ಷಾರಂಭದಲ್ಲಿಯೇ ತೆರೆಕಂಡಿವೆ. ಈಚೆಗೆ, ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶನದ ಹೊಸ ಸಿನಿಮಾ ಕೂಡ ಪೃಥ್ವಿ ಪಾಲಿಗೆ ಒಲಿದುಬಂದಿದೆ.

‘ಪ್ರತಿ ಸಿನಿಮಾ ಹೊಸ ಪಾಠ’ ಎನ್ನುವ ಪೃಥ್ವಿ ಅವರು, ತಮ್ಮ ಸಿನಿಮಾ ಪರಪಂಚದ ಬಗ್ಗೆ ‘ಸುಧಾ’ ಜೊತೆ ಮಾತನಾಡಿದ್ದಾರೆ.

◆ ‘ದಿಯಾ’ದಿಂದ ಇಲ್ಲಿಯವರೆಗಿನ ಪಯಣವನ್ನು ಏನೆಂದು ಕರೆದುಕೊಳ್ಳುತ್ತೀರ?

ಕಲಿಕೆ ಎನ್ನಬಹುದು. ‘ದಿಯಾ’ ನಂತರ ಹೊಸ ಹೊಸ ರೀತಿಯ ಪಾತ್ರಗಳನ್ನು ಕಂಡೆ. ಒಳ್ಳೆಯ ಪಾತ್ರಗಳು, ಒಳ್ಳೆಯ ಸಿನಿಮಾಗಳು ದೊರೆತವು. ಪರ್ಫಾರ್ಮೆನ್ಸ್‌ಗೆ ಅವಕಾಶವಿರುವಂಥ ಸಿನಿಮಾಗಳು ಸಿಗುತ್ತಿವೆ. ಅಂಥ ಪಾತ್ರಗಳಿಗೆ ನಿರ್ದೇಶಕರು ನನ್ನ ಹೆಸರನ್ನು ಗುರುತಿಸುತ್ತಿದ್ದಾರೆ. ಇದು ಅದೃಷ್ಟ.

◆ ಭಿನ್ನ ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದೀರ. ನಿಮ್ಮ ಸಾಮರ್ಥ್ಯವನ್ನು ಸಂಪೂರ್ಣ ಬಳಸಿಕೊಂಡ ಪಾತ್ರ ಯಾವುದು?

ನನ್ನ ಪೂರ್ಣ ಸಾಮರ್ಥ್ಯ ಬಳಸಿಕೊಂಡ ಪಾತ್ರ ಸಿಗಬೇಕಿದೆ. ಈಚೆಗೆ ಘೋಷಣೆಯಾಗಿರುವ, ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಅವರ ಸಿನಿಮಾ, ನನ್ನಲ್ಲಿರುವ ಸಾಮರ್ಥ್ಯವನ್ನು ಪೂರ್ಣಪ್ರಮಾಣದಲ್ಲಿ ಬಳಸಿಕೊಳ್ಳುವ ನಿರೀಕ್ಷೆಯಿದೆ.

◆ ಒಂದು ಪಾತ್ರ ಅಥವಾ ಸಿನಿಮಾ ಆಯ್ಕೆಯಲ್ಲಿ ನಿಮ್ಮ ಮಾನದಂಡ ಏನಾಗಿರುತ್ತೆ?

ಕಥೆ ಕೇಳುವಾಗ ಆ ಪ್ರಪಂಚ ನನಗೆ ವಿಷುವಲೈಸ್ ಆಗಬೇಕು. ಮತ್ತೊಂದು ಮುಖ್ಯ ಅಂಶ, ಕಥೆ ‘ಟೇಕ್ ಅವೇ’ ಆಗಬೇಕು. ಜನರು ಸಿನಿಮಾ ನೋಡಿದ ಮೇಲೆ ಅವರ ಮನಸ್ಸಿನಲ್ಲಿ ಒಂದಷ್ಟು ದಿನವಾದರೂ ಆ ಸಿನಿಮಾ ಉಳಿಯಬೇಕು. ಸಿನಿಮಾ ಮೂಲಕ ಬದಲಾವಣೆ ಆಗಬೇಕು ಎನ್ನುವುದು ದೊಡ್ಡ ಮಾತು. ಆದರೆ ಒಂದಷ್ಟು ಯೋಚನೆಗಳು ಹುಟ್ಟಿಕೊಳ್ಳಬೇಕು, ಒಂದು ಪ್ರಭಾವ ಉಳಿಯಬೇಕು. ಅಂಥ ಕಥೆ ನನ್ನ ನಿರೀಕ್ಷೆ. ಬರೀ ಮನರಂಜನೆಯಲ್ಲದೆ ಏನಾದರೂ ಮೌಲ್ಯಯುತ ಇರಬೇಕು. ಎಲ್ಲಾ ಸಿನಿಮಾದಲ್ಲಿ ಹಾಗೆ ಸಾಧ್ಯವಾಗದೇ ಇದ್ದರೂ ಅಂಥದ್ದೊಂದನ್ನು ನನ್ನ ಕಡೆಯಿಂದ ಪ್ರಯತ್ನಿಸುತ್ತೇನೆ. ಫೈಟ್, ಐಟಂ, ಫಾರ್ಮುಲಾ ಸಿನಿಮಾಗಳ ಆಯ್ಕೆ ಕಡಿಮೆ.

◆ ಟೈಪ್ ಕಾಸ್ಟ್ ಆಗುವ ಸಂದರ್ಭ ಬಂದಿದೆಯೇ?

‘ದಿಯಾ’ ಸಿನಿಮಾ ನಂತರ ಅದೇ ರೀತಿಯ ಕಥೆಗಳು ಬರಲು ಶುರುವಾದವು. ಅದನ್ನು ಬ್ರೇಕ್ ಮಾಡಬೇಕೆಂದೇ ನಾನು ಪ್ರಯೋಗಾತ್ಮಕ ಸಿನಿಮಾಗಳತ್ತ ಮನಸ್ಸು ಮಾಡಿದೆ. ‘ಭುವನಂ ಗಗನಂ’ನಲ್ಲಿ ಕೂಡ ಸವಾಲಿನ ಪಾತ್ರವೇ. ಒಂದು ಸಿನಿಮಾಗಿಂತ ಇನ್ನೊಂದು ಸಿನಿಮಾ ಬೇರೆ ಧಾಟಿಯಲ್ಲಿರಬೇಕೆಂದು ಬಯಸುತ್ತೇನೆ. ಪಾತ್ರ, ಭಾಷೆಯಲ್ಲೂ ಬದಲಾವಣೆ ಮಾಡಿಕೊಳ್ಳುತ್ತೇನೆ. ಮುಂದಿನ ಸಿನಿಮಾದಲ್ಲಿ ಮಂಡ್ಯ ಕನ್ನಡ ಮಾತನಾಡುವ ಪ್ರಯತ್ನ ಮಾಡುತ್ತಿದ್ದೇನೆ. ಅಂಥ ಪ್ರಯತ್ನಗಳಿಂದ ಕಲಿಯಲು ಸಿಗುತ್ತದೆ. ನನ್ನ ಮುಖ್ಯ ಉದ್ದೇಶವೂ ಕಲಿಕೆಯೇ. ಪ್ರತಿ ಸಿನಿಮಾ ಕೂಡ ಕಲಿಯುವ ಒಂದು ಅವಕಾಶ.

◆ ಪಾತ್ರವೊಂದಕ್ಕೆ ನಿಮ್ಮ ಸಿದ್ಧತೆ ಹೇಗಿರುತ್ತದೆ?

ಕಥೆಯಲ್ಲಿ ನನ್ನ ಪಾತ್ರದ ಆಯಾಮ ತಿಳಿದುಕೊಂಡು, ಅದರ ಬಗ್ಗೆ ಸಣ್ಣದೊಂದು ರಿಸರ್ಚ್ ಮಾಡಿಕೊಳ್ಳುತ್ತೇನೆ. ನನ್ನಿಂದ ಎಷ್ಟು ಆಗುತ್ತೆ ಅಷ್ಟು ಸಮರ್ಥವಾಗಿ ಮಾಡಲು ಪ್ರಯತ್ನಿಸುತ್ತೇನೆ.

◆ ಕನ್ನಡ ಚಿತ್ರರಂಗದಲ್ಲಿ ನೀವು ನಿರೀಕ್ಷೆ ಮಾಡುವಂಥ ಬದಲಾವಣೆ ಏನು?

ಪ್ರೇಕ್ಷಕರು ಓಪನ್ ಅಪ್ ಆಗುತ್ತಿದ್ದಾರೆ. ಕಂಟೆಂಟ್ ಆಧರಿತ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿದ್ದಾರೆ. ನಾನು ನಿರೀಕ್ಷೆ ಮಾಡುವ ಬದಲಾವಣೆ ಎಂದರೆ, ದೊಡ್ಡ ಪ್ರೊಡಕ್ಷನ್ ಹೌಸ್‌ಗಳಷ್ಟೇ ಅಲ್ಲದೆ ಚಿಕ್ಕಪುಟ್ಟ ಫಿಲ್ಮ್ ಮೇಕರ್‌ಗಳೂ ಯಶಸ್ಸು ಕಾಣಬೇಕು. ಹೊಸ ನಿರ್ದೇಶಕರು, ಹೊಸ ಬರಹಗಾರರು, ಹೊಸ ನಟರಿಗೆ ಯಶಸ್ಸು ಸಿಗಬೇಕು. ಎಷ್ಟೋ ಜನ ಪ್ರತಿಭಾವಂತರು ಇದ್ದಾರೆ. ಅವರಿಗೆ ಮುಖ್ಯವಾಹಿನಿಯಲ್ಲಿ ವೇದಿಕೆ ಸಿಗುತ್ತಿಲ್ಲ. ದೊಡ್ಡ ಪ್ರೊಡಕ್ಷನ್ ಅವರು ಸಿನಿಮಾ ಮಾಡುತ್ತಾರೆ, ಪ್ರೊಮೋಟ್ ಮಾಡಲು ಕೂಡ ಶಕ್ತಿ ಇರುತ್ತದೆ. ಜನರಿಗೆ ಸುಲಭವಾಗಿ ರೀಚ್ ಆಗುತ್ತೆ. ಆದರೆ ಚಿಕ್ಕ ಫಿಲ್ಮ್ ಮೇಕರ್‌ಗಳಿಗೆ ಅದು ಕಷ್ಟ. ಅಂಥವರಿಗೆ ವೇದಿಕೆ ಸಿಕ್ಕು ಅವರ ಸಿನಿಮಾಗಳು ಕ್ಲಿಕ್ ಆಗಬೇಕು. ಆಗ ಹೊಸ ದೃಷ್ಟಿಕೋನಗಳು ಬರುತ್ತವೆ. ಮನರಂಜನೆ, ಕಂಟೆಂಟ್ ಎರಡನ್ನೂ ಜನರು ಬಯಸುತ್ತಾರೆ. ಈ ಎರಡರ ನಡುವೆ ಬ್ಯಾಲೆನ್ಸ್ ಮಾಡುವಂಥ ಬ್ರಿಡ್ಜ್ ಸಿನಿಮಾಗಳನ್ನು ಮಾಡಿದರೆ ಒಳ್ಳೆಯದು ಅನ್ನುವುದು ನನ್ನ ನಂಬಿಕೆ. ಅಂಥ ಸಿನಿಮಾಗಳೇ ಗೆಲ್ಲುತ್ತಿವೆ ಕೂಡ.

◆ ಯಾವ್ಯಾವ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೀರಿ?

‘ಭುವನಂ ಗಗನಂ’ ಸಿನಿಮಾ ಬಿಡುಗಡೆಯಾಗಬೇಕಿದೆ. ನಿರ್ದೇಶಕ ಶ್ರೀರಾಜ್ ಅವರೊಂದಿಗೆ ಸಿನಿಮಾ ಮಾಡುತ್ತಿದ್ದೇನೆ. ಅದಕ್ಕಿನ್ನೂ ಶೀರ್ಷಿಕೆ ಇಟ್ಟಿಲ್ಲ. ಚಂದ್ರಶೇಖರ್ ಬಂಡಿಯಪ್ಪ ಅವರ ಸಿನಿಮಾ ಘೋಷಣೆಯಾಗಿದೆ. ಮಂಗಳೂರಿನ ಅಶ್ವಿನ್ ಎಂಬ ನಿರ್ದೇಶಕರ ಸಿನಿಮಾಗೆ ಸಹಿ ಮಾಡಿದ್ದೇನೆ. ■

